International Journal of Kannada Research
www.kannadajournal.com

ISSN: 2454–5813
IJKR 2017; 3(4): 101-102
© 2017 IJKR
www.kannadajournal.com
Received: 20-08-2017
Accepted: 21-09-2017

**ಡಾ. ವಿಜಯ ಶ್ರೀ ಸಬರದ**
ಪ್ರಾಧ್ಯಾಪಕರು, ಕ,ರಾ,ಮ,ವಿ.
ವಿಜಯಪುರ

**ಶೋಭಾ ಎನ್**
ಸಹಾಯಕ ಪ್ರಾಧ್ಯಾಪಕರು, (ಸಂಶೋಧನ ವಿಧ್ಯಾರ್ಥಿ, ಕ.ರಾ.ಮ ವಿಶ್ವವಿದ್ಯಾಲಯ,ವಿಜಯಪುರ. )
ಸ,ಪ್ರ,ದ ಕಾಲೇಜು, ಯಲಹಂಕ, ಬೆಂಗಳೂರು.
ಪೋನ್: ೯೪೪೯೯೧೨೦೧೩

**Correspondence**
**ಡಾ. ವಿಜಯ ಶ್ರೀ ಸಬರದ**
ಪ್ರಾಧ್ಯಾಪಕರು, ಕ,ರಾ,ಮ,ವಿ.
ವಿಜಯಪುರ

# ಮಹಿಳಾ ನಾಟಕಗಳಲ್ಲಿ ಬಿಡುಗಡೆಯ ತುಡಿತ

**ಡಾ. ವಿಜಯ ಶ್ರೀ ಸಬರದ, ಶೋಭಾ ಎನ್**

ಸಮಕಾಲೀನ ಮಹಿಳಾ ಸಾಹಿತ್ಯ ವನ್ನು ನೋಡಿದಾಗ ಕಂಡು ಬರುವ ಪ್ರಮುಖ ಲಕ್ಷಣ ಪುರಾಣದ ವಸ್ತು, ಪಾತ್ರಗಳ ಪುನರ್ ವ್ಯಾಖ್ಯಾನ. ಸ್ತ್ರೀವಾದ, ಆಧುನಿಕ ಮೌಲ್ಯಗಳ ನೆಲೆಯಲ್ಲಿ ಸಾಂಪ್ರದಾಯಿಕ ಕಟ್ಟಳೆ, ಚೌಕಟ್ಟುಗಳ ಬಂಧನಗಳಿಂದ ಮಹಿಳೆಯನ್ನು ಬಿಡುಗಡೆಗೊಳಿಸಿರುವುದು ಪ್ರಧಾನವಾಗಿ ಕಂಡು ಬರುತ್ತದೆ. ಇದು ಕೇವಲ ಸಾಹಿತ್ಯಕ ತುಡಿತವಾಗಿರದೆ ಸಾಮಾಜಿಕ ತುಡಿತವೂ ಹೌದು. ಪ್ರಸ್ತುತ ಲೇಖನದಲ್ಲಿ ವಿಶಿಷ್ಟ ಶೈಲಿಯ ನಾಟಕಗಳಿಂದ ಗಮನ ಸೆಳೆದಿರುವ ಹೆಚ್. ಎಲ್. ಪುಷ್ಪ ರವರ ಭೂಮಿಯಲ್ಲ ಇವಳು, ಕವಿತಾ ರೈ - ಲೋಕಾಮುದ್ರಾ ನಾಟಕಗಳ ನಾಯಕಿಯರಾದ ಅಮೃತಮತಿ ಮತ್ತು ಲೋಪಾಮುದ್ರೆ ಪಾತ್ರಗಳ ಬಿಡುಗಡೆಯ ತುಡಿತ ದ ಸ್ವರೂಪವನ್ನು ಚರ್ಚಿಸಲಾಗಿದೆ.

ಭೂಮಿಯಲ್ಲ ಇವಳು ನಾಟಕದ ಶೀರ್ಷಿಕೆಯೇ ಹೆಣ್ಣನ್ನು ಪ್ರಭಾವಳಿಗಳ ಭಾರದಿಂದ ಮುಕ್ತಗೊಳಿಸಿ ಆಕೆ ಕೂಡ ಸಹಜವಾದ ಆಸೆ ಆಕಾಂಕ್ಷೆ, ಕನಸು, ಸಾಮರ್ಥ್ಯ, ದೌರ್ಬಲ್ಯಗಳುಳ್ಳ ಮನುಷ್ಯಳು ಎಂದು ಧ್ವನಿಸುತ್ತದೆ. ಛೀ ಅಮೃತಮತಿ ಕಳಂಕಿತೆ ಎಂದು ಪತಿವ್ರತಾ ಧರ್ಮದ ಕಣ್ಣುಗಳಿಂದ ನಾಟಕಕಾರ್ತಿ ಆಕೆಯನ್ನು ನೋಡದೆ ಮಾನವೀಯ ನೆಲೆಯಲ್ಲಿ ಚಿತ್ರಿಸಲಾಗಿದೆ. ಇಲ್ಲಿನ ಅಮೃತಮತಿ ಪರಿಪೂರ್ಣ ಬದುಕಿಗಾಗಿ ಹಂಬಲಿಸುವವಳು, ಅನ್ಯರಿಗಾಗಿ ನಾನಲ್ಲ ನನಗಾಗಿಯೆ ನಾನು ಎಂಬ ಧೋರಣೆಯವಳು. ಇದು ಸ್ವಾರ್ಥವೇನಲ್ಲ. ಆಕೆ ತನ್ನ ಅಂತರಂಗವನ್ನು ದಾಸಿ ಮಾದೇವಿಯ ಬಳಿ ಅನಾವರಣಗೊಳಿಸುತ್ತಾಳೆ. ಹೊರನೋಟಕ್ಕೆ ಆಕೆ ರಾಣಿ ಸುಖದ ಸುಪ್ಪತ್ತಿಗೆಯಲ್ಲಿ ತೇಲಾಡುವವಳು ಆದರೆ ಸ್ವತಃ ಅಮೃತಮತಿಗೆ ಭೌತಿಕ ಸಂಪತ್ತಿನ ಮಧ್ಯೆ ಗೊಂಬೆಯಾಗಿರುವುದು ಸಾಕು ಸಾಕೆನಿಸಿದೆ. ಬಾಹ್ಯ ರಾಣಿಯಾದರೂ ಆಂತರಿಕವಾಗಿ ಸ್ವತಂತ್ರವಿಲ್ಲದ, ಅಧಿಕಾರವಿಲ್ಲದ, ಅಸ್ತಿತ್ವವಿಲ್ಲದ ಬದುಕಿನ ದೇಹವಾಗಿದ್ದಾಳಷ್ಟೆ.

“ಮುತ್ತು ರತ್ನ ಹವಳ ಮೈನ ಒತ್ತಿ ಹಣಾಗಿಸ್ತಾವಂತ, ಆಕೆಗೆ ಏಕಾಂತ ಬೇಕಂತ, ಏಕಾಂತ ಗಂಡ ಬೇಡಂತ” ಎಂಬ ಮಾದೇವಿಯ ಮಾತಿನಲ್ಲಿ ಸಾಮಾನ್ಯ ಮಾನವಳಾಗಬೇಕೆಂಬ ಆಕೆಯ ಬಯಕೆ ವ್ಯಕ್ತವಾಗುತ್ತದೆ.

ಅಮೃತಮತಿ-ಯಶೋಧರನ ದಾಂಪತ್ಯ ಮಾತು ಮನಸ್ಸಿಲ್ಲದ ವ್ಯಾಪಾರ ಅವನೂ ಇವಳಲ್ಲಿಲ್ಲ, ಇವಳೂ ಅವನಲ್ಲಿಲ್ಲ ಎಂಬಂತೆ ಯಾಂತ್ರಿಕವಾಗಿದೆ. ಇಲ್ಲಿ ಯಶೋಧರ ದೈಹಿಕ ಸಂಗಾತಿಯೆ ವಿನಾಃ ಭಾವನೆಗಳ ಸಂಗಾತಿಯಲ್ಲ, ಆಕೆಯ ಅಂತರಂಗಕ್ಕೆ ಕಿವಿಯಾಗಲಾರ. ಈ ಯಾಂತ್ರಿಕತೆಯಿಂದ ಬೇಸತ್ತು ಆಕೆ ಅಸ್ಪಷ್ಟವಾದ ತೊಳಲಾಟ, ಸಂಧಿಗ್ದತೆಗೆ ಒಳಗಾಗುತ್ತಾಳೆ. ಈ ತೊಳಲಾಟವನ್ನು ಯಶೋಧರನ ಮುಂದೆ ವ್ಯಕ್ತಪಡಿಸಿದರೂ “ನಾನು ರಾಜ ಈ ಎಲ್ಲಾ ರಾತ್ರಿಗಳೂ ನನ್ನವೇ ಆಗಬೇಕು” ಎನ್ನುವ ರಾಜನಿಗೆ ಆಕೆಯ ಅಂತರಂಗದ ಖಾಲಿತನ ಅರಿವಾಗುವುದಿಲ್ಲ. “ನನ್ನನು ಎತ್ತಿ ಆ ಬಾನಿನೆತ್ತರಕ್ಕೆ ಹಿಡಿದು ಸಂತೈಸುವ ಕೈಗಳಾವು” ಎಂಬ ಹುಡುಕಾಟದಲ್ಲಿರುವ ಅಮೃತಮತಿ ಬದಗನ ಆಪ್ತರಾಗಕ್ಕೆ ಸಿಲುಕುತ್ತಾಳೆ. ಆ ರಾಗ ಆಕೆಯ ಮನಸ್ಸನ್ನು ಸ್ಪರ್ಶಿಸಿ ಭಾವ ತರಂಗಗಳನ್ನೆಬ್ಬಿಸುತ್ತದೆ. “ ಮೊಲೆಯೂಡಿಸುವ ತಾಯಿಯದೇ ಹಾಡು, ನನ್ನ ಮನಸ್ಸಿನ ಗುರಿಯಿಲ್ಲದ ಓಟಕ್ಕೆ ಲಗಾಮು ತೊಡಿಸಿದ ಅವನ್ಯಾರೇ ಆಗಿರಲಿ ಇದೋ ಕೊಟ್ಟೆನನ್ನ ಮನಸ್ಸನ್ನು, ನನ್ನನ್ನೂ ಸಹ” ಎಂದು ಬದಗನನ್ನು ಆಯ್ಕೆ ಮಾಡುವ ಮೂಲಕ ರಾಜ ನಿಂದ ಬಿಡುಗಡೆಗೊಳ್ಳುತ್ತಾಳೆ. ಈ ಬಿಡುಗಡೆ ಕೇವಲ ರಾಜನಿಗೆ ಸೀಮಿತವಲ್ಲ ಕೃತಕತೆ, ಸ್ಥಗಿತತೆ ಯ ಬದುಕಿನಿಂದ ಸಹಜತೆ, ಮುಕ್ತತೆಯ ಬದುಕಿನ ಕಡೆಗೆ ಚಲಿಸುತ್ತಾಳೆ.

ಕವಿತಾರೈ ಅವರ ನಾಟಕ ಲೋಕಾಮುದಾ. ಈ ನಾಟಕದ ಶೀರ್ಷಿಕೆಯೇ ಪರಂಪರೆಯ ಲೋಪಗಳಿಂದ ಹೆಣ್ಣನ್ನು ಮುಕ್ತಗೊಳಿಸಿ ಲೋಕಾಮುದ್ರೆಯಾಗಿಸಿರುವುದು ಕಂಡು ಬರುತ್ತದೆ. ಬ್ರಹ್ಮ, ತನ್ನ ಮಗಳಾದ ಲೋಪಾಮುದ್ರೆ ಯನ್ನು ವೃದ್ಧಾಪ್ಯದ ಸೇವೆಗಾಗಿ ಮಗಳನ್ನು ಅಪೇಕ್ಷಿಸಿ ತಪಸ್ಸು ಮಾಡಿದ ಕವೇರನಿಗೆ ದಾನ ಮಾಡುತ್ತಾನೆ.

ತಂದೆಯ ನಿರ್ಧಾರವನ್ನು ಅನಿವಾರ್ಯವಾಗಿ ಒಪ್ಪಿ ಕಾವೇರಿಯಾಗಿ ಬ್ರಹ್ಮಗಿರಿಯ ನಿಸರ್ಗದ ಮಡಿಲಲ್ಲಿ ನೆಲೆಸುತ್ತಾಳೆ. ವಿಂಧ್ಯ ಪರ್ವತದ ಮನಸ್ಸನ್ನು ಅರಿಯುವ ಶಕ್ತಿಯುಳ್ಳ ವೃದ್ಧ ಅಗಸ್ತ್ಯ ಹೆಣ್ಣಿನ ಮನಸನ್ನು ಅರಿಯಲಾರ ಹೀಗಾಗಿಯೇ ಕವೇರನ ಮುಂದೆ ಲೋಪಮುದ್ರೆಯನ್ನು ಅಪೇಕ್ಷಿಸಿ ವಿವಾಹ ಪ್ರಸ್ತಾಪ ಮಾಡುತ್ತಾನೆ. ಅಭಿಮಾನದಿಂದ ಅಂಧನಾದ ಕವೇರ ಮುನಿಯ ವಯಸ್ಸನ್ನು ಪರಿಗಣಿಸದೆ ಲೋಪಾಮುದ್ರೆಯನ್ನು ಧಾರೆ ಎರೆಯುತ್ತಾನೆ. ಹೀಗೆ ಸಾಂಪ್ರದಾಯಿಕ ಮೌಲ್ಯಗಳನ್ನು ಪ್ರತಿನಿಧಿಸುವ ಬ್ರಹ್ಮ, ಅಗಸ್ತ್ಯ ಮತ್ತು ಕವೇರನ ಸ್ವಾರ್ಥಕ್ಕೆ ಬಲಿಯಾಗುತ್ತಾಳೆ. ಹೀಗೆ ಪುರುಷಾಧಿಕಾರಕ್ಕೆ ಬಲಿಯಾದರೂ ಬದುಕುವ ಇಚ್ಛಾಶಕ್ತಿಯನ್ನು ಕಳೆದುಕೊಳ್ಳದ ಿ ಅಗಸ್ತ್ಯನನ್ನು ಆಕೆ ಹಿಂಬಾಲಿಸುತ್ತಾಳೆ.

ಯೌವ್ವನ ಸಹಜ ಆಸೆ- ಆಕಾಂಕ್ಷೆಗಳನ್ನು ಹೊತ್ತು ಅಗಸ್ತ್ಯನ ಸಾನಿಧ್ಯಕ್ಕೆ ಹಂಬಲಿಸುವ ಲೋಪಾಮುದ್ರೆ ಒಂದೆಡೆಯಾದರೆ, ಸದಾ ಯಜ್ಞ-ಯಾಗಾದಿಗಳಲ್ಲಿ, ತಪಸ್ಸಿನಲ್ಲಿ ಮೈಮರೆತು ಲೌಕಿಕವನ್ನು ನಿರ್ಲಕ್ಷಿಸುವ ಅಗಸ್ತ್ಯ ಮತ್ತೊಂದೆಡೆ. ಹೀಗಾಗಿ ಅವರ ದಾಂಪತ್ಯ ಅರ್ಥಹೀನ. ಇಂತಹ ಬದುಕನ್ನು ಅರ್ಥಪೂರ್ಣವಾಗಿಸುವ ಹಂಬಲದಿಂದ ''ಅರೆ ಕ್ಷಣವೂ ತನ್ನನ್ನು ತೊರೆಯಬಾರದೆಂಬ'' ಬೇಡಿಕೆಯನ್ನಿಡುತ್ತಾಳೆ. ಈ ಬೇಡಿಕೆಗೆ ಅಗಸ್ತ್ಯ ನೀಡುವ ಪರಿಹಾರ ''ಕಮಂಡಲದಲ್ಲಿ ನೀರಾಗಿಸುವಿಕೆ''. ಇದು ಲೋಪಾಮುದ್ರೆಯ ಆಸೆ ಆಕಾಂಕ್ಷೆಗಳನ್ನು ಹತ್ತಿಕ್ಕುವ, ತನ್ನ ತಪಸ್ಸಿನ ಶಕ್ತಿಯನ್ನು ಪ್ರದರ್ಶಿಸುವ ಅಹಂಕಾರವಾಗಿ ಕಂಡು ಬರುತ್ತದೆ.

ಕಮಂಡಲದಲ್ಲಿ ನೀರಾಗಿಸುವುದು ಲೋಪಾಮುದ್ರೆಗೆ ಆಘಾತವಾದರೂ ಸವಾಲನ್ನು ಸ್ವೀಕರಿಸಲು ನಿಶ್ಚಯಿಸಿ ''ಪುರುಷ ಸಂಕಲ್ಪಕ್ಕೆ ತಿಳಿದಿದೆ ಹೆಣ್ಣು ನೀರಿನಂತೆ ಯಾವ ಪಾತ್ರೆಗೆ ತಂಬಿದರೂ ಅದೇ ಆಕಾರ, ಅದೇ ರೂಪ, ಮಾತಿಗೆ ತಪ್ಪಿ ನಡೆದರೆ ನಾನು ಹರಿಯುವವಳೇ'' ಎಂಬ ಎಚ್ಚರಿಕೆಯನ್ನು ನೀಡಿ ಕಮಂಡಲದಲ್ಲಿ ನೀರಾಗಿ ಅಗಸ್ತ್ಯನನ್ನು ಅನುಸರಿಸುತ್ತಾಳೆ. ಹೆಣ್ಣಿನ ಚೈತನ್ಯವನ್ನು, ಕ್ರಿಯಾಶೀಲತೆಯನ್ನು ನೀರಿನ ಪ್ರತಿಮೆ ಇಲ್ಲಿ ಸಶಕ್ತವಾಗಿ ಧ್ವನಿಸುತ್ತದೆ. ಅಗಸ್ತ್ಯನಿಲ್ಲದ ಸಂದರ್ಭದಲ್ಲಿ ಬ್ರಹ್ಮಗಿರಿಯ ಗಾಳಿಯ ಭೋರ್ಗರೆತಕ್ಕೆ ಕಮಂಡಲ ಮುಗುಚಿ ನೀರು ಹರಿಯುತ್ತದೆ. ಮಾತಿಗೆ ತಪ್ಪಿದ ಅಗಸ್ತ್ಯನನ್ನು ತೊರೆಯಲು ಲೋಪಾಮುದ್ರೆ ನಿರ್ಧರಿಸುತ್ತಾಳೆ. ಈ ನಿರ್ಧಾರವನ್ನು ಅಸ್ಥಿರಗೊಳಿಸಲು ಕವೇರ, ಅಗಸ್ತ್ಯ ಆಕೆಗೆ ಸತಿಧರ್ಮವನ್ನು ನೆನಪಿಸುತ್ತಾರೆ. ಈ ಪಿತೃ ಪ್ರಧಾನ ಮೌಲ್ಯಗಳ ತಂತ್ರವನ್ನರಿತ ಲೋಪಾಮುದ್ರೆ ''ಸತೀ ಧರ್ಮ ಎಂಬುದು ವಂಚನೆ, ಅಸಹಾಯಕ ಹೆಣ್ಣನ್ನು ಜೀವಂತವಾಗಿ ಕತ್ತರಿಸುವ ಮೃತ್ಯು ಮಂತ್ರ'' ಎನ್ನುವ ಮೂಲಕ ಈ ಜಡ ಮೌಲ್ಯಗಳ ಪಟ್ಟಿಯನ್ನು ಹೆಣ್ಣಿನ ಕಣ್ಣಿಗೆ ಕಟ್ಟಿ ಆಕೆಯ ಚೈತನ್ಯದ ಹಲವು ಸಾಧ್ಯತೆಗಳನ್ನು ಹತ್ತಿಕ್ಕಿದ ಸಿದ್ಧ ಪರಂಪರೆಯನ್ನು ನಿರಾಕರಿಸುತ್ತಾಳೆ. ಕಟ್ಟಳೆಯ ಕಮಂಡಲದ ಬದುಕಿನಿಂದ ಲೋಕಾಕಲ್ಯಾಣಾರ್ಥವಾಗಿ ತನ್ನ ಚೈತನ್ಯವನ್ನು ವಿಸ್ತರಿಸಿ ಸಕಲ ಸೃಷ್ಠಿ ಸಂಕುಲಗಳಿಗೆ ಆಸರೆಯಾಗುತ್ತಾಳೆ. ಅಗಸ್ತ್ಯ, ಬ್ರಹ್ಮ, ಕವೇರ ದಮನ ಸಂಸ್ಕೃತಿಯ ಪ್ರತಿನಿಧಿಗಳಾದರೆ, ಲೋಪಾಮುದ್ರೆ ಸೃಜಿಸುವ ಸಂಸ್ಕೃತಿಯ ಪ್ರತಿನಿಧಿಯಾಗಿ ಕ ಂಡುಬರುತ್ತಾರೆ.

ಹೀಗೆ ಅಮೃತಮತಿ ಹಾಗು ಲೋಪಾಮುದ್ರೆ ಪಾತ್ರಗಳು ಸ್ಥಾಪಿತ-ಜಡ ಮೌಲ್ಯಗಳನ್ನು ವಿರೋಧಿಸಿ, ಬಂಧನ, ಕೃತಕತೆ, ಅಸ್ಪಷ್ಟತೆಯ ಅರ್ಥಹೀನ ಬದುಕಿನಿಂದ ಬಿಡುಗಡೆಗೊಂಡು, ಸ್ವಾತಂತ್ರ, ಸ್ಪಷ್ಟತೆ, ಸಹಜತೆಯ ಬದುಕಿನ ತುಡಿತದ ರೂಪಕಗಳಾಗಿ ಚಿತ್ರತವಾಗಿವೆ.

**ಪರಾಮರ್ಶನ ಕೃತಿಗಳು:**


1. ಹೆಚ್ ಎಲ್ ಪುಷ್ಪ ಭೂಮಿಯಲ್ಲ ಇವಳು, ಸಿ.ವಿ. ಜಿ ಪಬ್ಲಿಕೇಷನ್, ೨೦೦೪.
2. ಕವಿತಾ ರೈ, ಲೋಕಾಮುದ್ರೆ, ದೇಸಿ ಪುಸ್ತಕ, ೨೦೧೧.